ಬೈಲಹೊಂಗಲ ತಾಲ್ಲೂಕು ಪೈಕಿ ಉಡಿಕೇರಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವುದು

330 - ಶ್ರೀ. ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ತಾಲ್ಲೂಕು ಪೈಕಿ ಉಡಿಕೇರಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ಸಲುವಾಗಿ ಗ್ರಾಮದ ಜನರಿಂದ 25 ಸಾವಿರ ರೂ.ಗಳನ್ನು ಜಾಯಿಂಟ್ ಅಕೌಂಟ್ ಮೇಲೆ ಯಾವಾಗ ಇಡಲಾಯಿತು?*

ಆ) *ಈ ಆರೋಗ್ಯ ಕೇಂದ್ರವನ್ನು ತೆರೆಯಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?*

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು)

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಉಡಿಕೇರಿ ಗ್ರಾಮದ ಸ್ಥಳೀಯರು ಈ ಹಿಂದೆ ಪ್ರಾಥಮಿಕ ಆರೋಗ್ಯ ಘಟಕದ ಮಂಜೂರಾತಿಗಾಗಿ ರೂ.25,000-00 ಗಳನ್ನು 1985-86ನೇ ಸಾಲಿನಲ್ಲಿ ಉಡಿಕೇರಿಯ ಮಲಪ್ರಭಾ ಗ್ರಾಮೀಣ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದರು.

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಸ್ಥಳಗಳನ್ನು ಗುರುತಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಕಾರ್ಯವನ್ನು ಸಂಬಂದಿಸಿದ ಜಿಲ್ಲಾ ಪರಿಷತ್‌ನವರಿಗೆ ವಹಿಸಿದ್ದು, ಬೆಳಗಾಂ ಜಿಲ್ಲಾ ಪರಿಷತ್‌ನವರು ಉಡಿಕೇರಿ ಗ್ರಾಮಕ್ಕೆ ಶಿಫಾರಸ್ಸು ಮಾಡದೆ ಇರುವುದರಿಂದ ಈ ವರೆಗೂ ಸದರಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾಗಿರುವುದಿಲ್ಲ.. ಮುಂಬರುವ ವರ್ಷಗಳಲ್ಲಿ, ಜಿಲ್ಲಾ ಪರಿಷತ್‌ನವರು ಶಿಫಾರಸ್ಸು ಮಾಡಿದಲ್ಲಿ, ಉಡಿಕೇರಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಮೆಡಿಕಲ್ ಪ್ರ್ಯಾಕ್ಟಿಸ್‌ನರ್ ಇವರು ಖಾಸಗಿ ಪ್ರ್ಯಾಕ್ಟಿಸ್ ಮಾಡುವುದನ್ನು ನಿಷೇದಿಸುವ ಬಗ್ಗೆ

(331) - ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸರ್ಕಾರಿ ದವಾಖಾನೆಯಲ್ಲಿ ನೌಕರಿ ಮಾಡುತ್ತಿರುವ ವೈದ್ಯರು ಖಾಸಗಿ ಪ್ರ್ಯಾಕ್ಟೀಸ್ ಮಾಡುವುದನ್ನು ನಿಷೇದಿಸುವ ವಿಷಯ ಸರ್ಕಾರದ ಮುಂದೆ ಇರುವುದೇ?*

ಆ) *ಹಾಗಿದ್ದಲ್ಲಿ ಸರ್ಕರದವರು ಅದನ್ನು ನಿಷೇದಿಸುವ ಬಗ್ಗೆ ಯಾವ ಕ್ರಮವನ್ನು ಕೈಗೊಂಡುರುವರು?*

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು

ಆ) ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿದೆ.